ನಿನಗೆ ಅಂಥ ವರಾನೇ ದಯಪಾಲಿಸ್ತೀನಿ...'

ಬ್ರಹ್ಮ ವರ ಕೊಡಲು ರೆಡಿಯಾದಂತೆ 'ತಥಾಸ್ತು' ಎನ್ನುವಂತೆ ತನ್ನ ಬಲಹಸ್ತವನ್ನು ವರಪ್ರದವಾಗಿ ಮೇಲೆತ್ತಿದ.

ಕೂಡಲೇ ಕಮ್ಲೂ – 'ಒನ್... ಒನ್ ಮಿನಿಟ್...' ಎಂದು ಬಾಯಿ ಹಾಕಿದಳು.

'ನಿಮ್ಮ ಬಾಯಿ ಮರದ್ದಾಗಿದ್ರೆ, ಇಷ್ಟು ಹೊತ್ತಿಗೆ ಯಾವಾಗಲೋ ಒಡೆದುಹೋಗ್ತಿತ್ತು... ಅಬ್ಬಾ, ಅದೇನು ತಲೆ ತಿನ್ತೀರಾ, ಒಂದು ಗಳಿಗೆ ಬಾಯಿಗೆ ಜಿಪ್ ಹಾಕ್ಕೊಂಡು ಕೂತ್ಕೊಳ್ಳಿ... ತಲೆ ಸಿಡೀತಿದೆ... ಕಿವಿಯಲ್ಲಿ ಕಾದ ಕಬ್ಬಿಣದ ರಸ ಹುಯ್ದ ಹಾಗಾಗ್ತಿದೆ... ಮನೆಯಲ್ಲಿ ಶಾಂತಿ ಅನ್ನೋದೇ ಹಾರಿಹೋಗಿದೆ... ಸಾಲದ್ದಕ್ಕೆ ಎಲ್ಲದರಲ್ಲೂ ಆಕ್ಷೇಪಣೆ.... ಬಾಯಿಗೆ ತಕ್ಕ ಹಾಗೇ ಘಾಟಿ ಸ್ವಭಾವ ನಿಮ್ದು.. ಸುಮ್ನೆ ಎಲ್ಲದಕ್ಕೂ ವಾದ ವಿವಾದ... ಎಲ್ಲದರಲ್ಲೂ ನಿಮ್ಮ ಮಾತೇ ಗೆಲ್ಲಬೇಕು, ನಡೆಯಬೇಕು... ಎಂಥ ಸ್ವಾರ್ಥಿ ನೀವು. ನಿಮ್ಮಂಥ ದಬ್ಬಾಳಿಕೆ ಮಾಡೋ ಆಸಾಮಿ ಜೊತೆ ನಾನೊಂದು ಗಳಿಗೇನೂ ಇರಕ್ಕಾಗಲ್ಲ...' ಎಂದು ಗೆಳತಿ ರಮಾ, ತನ್ನ ಗಂಡನ ದರ್ಪದ ನಡವಳಿಕೆ ಬಗ್ಗೆ ಹೇಳಿಕೊಳ್ತಾ, ಸದಾ ಗೋಳಿಡುತ್ತಿದ್ದ ಬಗ್ಗೆ ನೆನೆದು, ಕಮ್ಲೂ ಮುಖ ಹಿಂಡಿ ತನ್ನ ಎರಡೂ ಕಿವಿ ಮುಚ್ಚಿಕೊಂಡಳು.

ದಿನಾ ಪಾರ್ಕಿನಲ್ಲಿ ವಾಕ್ ಮಾಡುವಾಗ, ಶ್ರೀಕಂಠು ತನ್ನಿಂದ ಮಾರುದೂರ ತಲೆ ಬಗ್ಗಿಸಿಕೊಂಡು ನಡೆಯುತ್ತಿರ್ತಾನೆ. ಆಚೀಚೆ ಏನು ನಡೀತಿದೆ, ಯಾರು ಹೇಗೆ ವಾಕ್ ಮಾಡ್ತಿದ್ದಾರೆ, ಕಲ್ಲುಬೆಂಚಿನ ಮೇಲೆ ಕುಳಿತ ಹುಡುಗ ಹುಡುಗಿಯರ ಪ್ರಣಯದಾಟಗಳನ್ನು ಕಣ್ಣೆತ್ತಿಯೂ ನೋಡದೆ, ಸುತ್ತಮುತ್ತಲಿನವರ ಸಂಭಾಷಣೆಗಳಿಗೆ ಕಿವಿಗೊಡದೆ, ಕನಿಷ್ಠ ಕುತೂಹಲವೂ ಇಲ್ಲದೆ, ಯಂತ್ರದಂತೆ ಸುಮ್ಮನೆ ಹೆಜ್ಜೆ ಹಾಕುವ ಜಡಭರತ ಗಂಡನ ಪರಿ ಕಮ್ಲೂಗೆ ರೇಜಿಗೆ ತರಿಸಿತ್ತು.

'ನಮ್ಮ ದೇವರ ಸತ್ಯ ನಮಗೆ ಗೊತ್ತಿಲ್ವೇ ಅನ್ನೋ ಹಾಗೇ, ತನ್ನ ಗಂಡ ಅರ್ಥಾತ್ ಶ್ರೀಕಂಠು ಎಂದೂ ವಾಲಾಡಿಕೊಂಡು ಸಡಿಲವಾಗಿ ಮೈ ಅಲ್ಲಾಡಿಸಿಕೊಂಡು ನಡೆಯೋನೇ ಅಲ್ಲ. ಎಣಿಸಿದ ಅಳತೆಯಲ್ಲಿ ಹೆಜ್ಜೆ ಹಾಕ್ಕೊಂಡು ಹೋಗೋ ಆಸಾಮಿ, ಎಂದೂ ಹಿಂದೆಮುಂದೆ, ಆಚೆ ಈಚೆ

